ಭಾರಿ ಕೆಲ್ಸ ಅಲ್ಲ ಬಿಡ್ರೀ... ಊರಾಗೆ ನಮ್ಮ ಮನೀನೂ ಶಾನೆ ಹಳೇದು... ನಾನೇ ಕುಂತು ರಿಪೇರಿ ಮಾಡ್ತಿದ್ದೇರಿ... ನಿಮ್ಮ ಮನಿ ಬಗ್ಗೆ ಚಿಂತಿ ಮಾಡ್ಬೇಡ್ರಿ... ಕಮ್ಮಿ ಖರ್ಚಿನಾಗ ನಾನಾ ರಿಪೇರಿ ಮಾಡ್ತೀನಿ... ಹಾಗಂತ ಕಮಿಟಿಗೆ ಹೇಳಿ ಒಪ್ಪಿಸ್ರಿ...' ಹಿರಿಯ ಭಟ್ಟರು ಹೇಳಿದರು, 'ರಿಪೇರಿಗೇನು ಭಾಳ ಜನ ಇದಾರೆ. ಆದ್ರೆ ಎಲ್ಲ ಸದಸ್ಯರು ಈ ಖರ್ಚಿಗೆ ಒಪ್ಪಬೇಕಲ್ಲ... ಅದಕ್ಕೇ ಸುನಂದಮ್ಮನೋರ ಬಳಿ ಹೋಗಿ ಹೇಳೋಣ ಅಂತ ಇವ್ನಿಗೆ ಹೇಳ್ತಾ ಇದ್ದೆ... ಅವ್ರು ಹೇಳಿದ್ರೆ ಯಾರೂ ಅಡ್ಡ ಮಾತು ಎತ್ತೊಲ್ಲ.

'ಅಂದ್ರಾ... ನೀವು ಅವ್ರ ಬಂಗ್ಲೀ ಕಡೀಕೆ ಹೊಂಟ್ರ ಏನಾ...?'

'ಹೌದು.'

'ಹಂಗಾರ ಭಲೊ ಆತು ನೋಡ್ರೀ... ನನ್ನ ಕಮಿಟಿಗೆ ಸೇರಸ್ಕೊಂಡ್ರೆ ಭಲೊ ಆದೀತು ಅಂತ ಅವ್ರನ್ನ ನೋಡ್ ಬೇಕು ಅಂತ ಅದೀನ್ರಿ... ನಾನೂ ಬರ್ಲೇನ್ರಿ...?'

ಶ್ರೀಧರ ಭಟ್ಟರೆಂದರು, 'ಅಲ್ಲೋ ಮಹರಾಯ... ಮೊದಲೇ ನಮಗೆ ರಿಪೇರಿ ಕೆಲ್ಸಕ್ಕೆ ಅಡಚಣೆಗಳು ಬರ್ತಾ ಇವೆ... ಏನೊ, ಹೋಗಿ ಸುನಂದ ಬನ್ನಪ್ನೋರ್ನ ನೋಡಿ ಕೆಲ್ಸ ಮುಗಿಸ್ಕೊಳೋಣ ಅಂತ ಇದ್ರೆ... ನಿಂದೇನು ಅಪಶಕುನವೊ ಮಹರಾಯ...! ಒಳ್ಳೆ ಕೆಲ್ಸಕ್ಕೆ ಹೊರಟಾಗ 'ನಾನೂ ಬರ್ತೀನಿ' ಅನ್ನಾಬಾರದೊ... ಕೆಲ್ಸ ಆಗೊಲ್ಲ. ಅಲ್ಲದೆ ಮೂರು ಜನ ಹೋದ್ರಂತೂ ಕೆಲ್ಸ ಆದ್ಹಾಗೇ...' ಎಂದರು ಖಾರವಾಗಿ. ಪ್ರಸಾದ ಒಬ್ಬ ಪೂಜಾರಿ ಮಗನಾಗಿ, ದೇವಸ್ಥಾನದಲ್ಲಿನ ವೃತ್ತಿ ಕೈಗೊಂಡಿದ್ದರೂ ಅವನಿಗೆ ಮೂಢ ನಂಬಿಕೆಗಳು ಇರಲಿಲ್ಲ. ಆಧುನಿಕ ಮನೋಭಾವ ಒಪ್ಪಿಕೊಂಡವನು. ಅಷ್ಟಲ್ಲದೇ ತೀರ ಮೃದು ಸ್ವಭಾವದವನು. ತಂದೆಯ ಮಾತು ಅವನಿಗೆ ಸರಿ ಬರಲಿಲ್ಲ, 'ಅಪ್ಪ, ಶಿವಣ್ಣನೂ ಬರ್ಲಿ... ಒಂದು ರಿಪೇರಿ ಕೆಲ್ಸಕ್ಕೂ ಶಕುನ ನೋಡ್ಬೇಕಾ?...'

* * *

## ಸುನಂದ ಬನ್ನಪ್ಪ ಮನೆಯಲ್ಲಿ ಗಂಗಾ

ಗಂಗೆ, ಸುನಂದ ಬನ್ನಪ್ಪನವರ ಮನೆಯಲ್ಲಿ ಕುಳಿತು ಅವರ ಬರುವಿಕೆಗಾಗಿ ಕಾಯುತ್ತಿದ್ದಳು. ಕೊನೆಗೊಮ್ಮೆ ಅವರ ಕಾರು ಬಂದಿತು. ಅವರು ಕಾರಿಂದ ಇಳಿಯುತ್ತಿರುವಾಗ, ರಸ್ತೆಯ ವಿರುದ್ಧ ದಿಕ್ಕಿನಿಂದ ಬರುತ್ತಿದ್ದ ಶ್ರೀಧರ ಭಟ್ಟರು, ಪ್ರಸಾದ ಮತ್ತು ಶಿವಣ್ಣನನ್ನು ಕಂಡು ಅವಳೆದೆ ಧಸಕ್ಕೆಂದಿತು. ಸುನಂದ ಬನ್ನಪ್ಪ ಮೊದಲು ಅವರನ್ನು ಕಾಣದೆ ತಮ್ಮ ಪಾಡಿಗೆ ತಾವು ಮನೆಯತ್ತ ನಡೆಯ ತೊಡಗಿದರು. ಆದರೆ ಗಂಗೆಯನ್ನು ಕಂಡ ಕೂಡಲೇ ಅವರಾಗಿಯೇ ಕೇಳಿದರು.

'ಏನ್ಸಮಾಚಾರ ಗಂಗಾ...? ಬಾ... ಒಳಗೆ ನನ್ನ ಜೊತೆ ಬಾ...' ಎನ್ನುವಾಗ ಆ ಮೂವರೂ ಗಂಡಸರೂ ತಾವೇ ಮುಂದಾಗಿ ಬಂದು ನಮಸ್ಕರಿಸಿದರು. ಅವರಿಗೆ ಪ್ರತಿ ನಮಸ್ಕಾರ ಮಾಡಿ ಮನೆಯ ಮೆಟ್ಟಿಲು ಏರಿದಾಗ ಈ ಗಂಡಸರೂ ಹಿಂಬಾಲಿಸಿದರು. ಗಂಗಾ ಮಾತ್ರಾ ಹಿಂಜರಿದು ಹಿಂದಕ್ಕೇ ಉಳಿದುದನ್ನು ಗಮನಿಸಿ ಸುನಂದ ಅವರು ಅವಳನ್ನು ಕರೆದು ಒಳಗೆ ಬರ ಮಾಡಿಕೊಳ್ಳುತ್ತಾ ಆ ದೊಡ್ಡ ಗಾಜಿನ ಕಿಟಕಿ ತೆರೆದರು.

ಎಲ್ಲರೂ ಸಂದರ್ಶನ ಕೊಠಡಿ ಒಳಹೊಕ್ಕರು. ಇದೀಗ ಸುನಂದ ಅವರು ತೆರೆದ ಕಿಟಕಿಯಿಂದ ಬೆಳಕು ನುಗ್ಗಿ ಒಳಕ್ಕೆ ಬಂದಿತು. ಕೋಣೆಯ ಗೋಡೆಗೆ ತಾಗಿದಂತೆ ಸುತ್ತಾ ಸಂದರ್ಶನಕ್ಕೆ ಬರುವವರಿಗಾಗಿ ಕುರ್ಚಿಗಳನ್ನಿಟ್ಟು, ತಲೆಭಾಗದಲ್ಲಿ ಒಂದೇ ಕುರ್ಚಿ ಇರಿಸಿದ್ದರು. ಆ ಕುರ್ಚಿ ಸದಾಕಾಲದಲ್ಲಿ ಶ್ರೀಮತಿ ಬನ್ನಪ್ಪನವರಿಗೇ ಮೀಸಲು. ಅಲ್ಲಿ ಯಾರಾದರೂ ಸಂದರ್ಶಕರು ಆಕೆ ಬರುವ ಮುಂಚೆಯೇ ಬಂದು ಅರಿಯದೇ ಆ ಕುರ್ಚಿ ಮೇಲೆ ಕುಳಿತುಬಿಟ್ಟರೆ, ಅಲ್ಲೇ ಬಾಗಿಲ ಬಳಿ ಇರುತ್ತಿದ್ದ ಆಳು ಕೂಡಲೇ ಹೇಳಿಬಿಡುತ್ತಿದ್ದ! '...ಇದು ಮೇಡಂ ಕುರ್ಚಿ... ಕೂರಬೇಡಿ... ದಯವಿಟ್ಟು ಬೇರೆ ಯಾವುದಾದರೂ ಕುರ್ಚಿಲಿ ಕುಳಿತುಕೊಳ್ಳಿ...'

ಆ ಕುರ್ಚಿ ಮೇಲೆ ಈಗ ಸುನಂದ ಬನ್ನಪ್ಪ ಹೋಗಿ ಕುಳಿತುಕೊಂಡರು. ಆ ಕುರ್ಚಿ ಪಕ್ಕದಲ್ಲಿ ಒಂದು ಪುಟ್ಟ ಮೇಜು ಇತ್ತು. ಅದರ ಮೇಲೆ ಬನ್ನಪ್ಪ ಕುಟುಂಬದ ಫೋಟೊ. ಅದರ ಮೇಲೆ ಗೋಟೆಯಲ್ಲಿ ಇಂದಿರಾ ಗಾಂಧಿಯವರು ಕರ್ನಾಟಕಕ್ಕೆ ಬಂದಾಗ ತಾವೆಲ್ಲ ಕಾಂಗ್ರೆಸ್ ಕಾರ್ಯಕರ್ತರ ಜೊತೆ ತೆಗೆಸಿಕೊಂಡ ಭಾವ ಚಿತ್ರವಿತ್ತು. ಸ್ವಲ್ಪ ಈಚೆಗೆ ಇದ್ದ ಗಾಜಿನ ಕಪಾಟಿನಲ್ಲಿ ತಾತನ ಕಾಲದ ಪೂರ್ವಿಕರು ಕೂಡಿಟ್ಟ ಅಪರೂಪದ ಪಿಂಗಾಣಿ ಸಾಮಾನುಗಳು, ಗೊಂಬೆಗಳೂ ಇದ್ದವು. ಸುನಂದ ಬನ್ನಪ್ಪ ದಂಪತಿಗಳು



## ಇಲ್ಲಿಯವರೆಗೆ

ಶಿವಣ್ಣ ಹುಬ್ಬಳ್ಳಿಗೆ ಹೋದಾಗ ಗಂಗಾಳನ್ನು ಬಿಟ್ಟು ಬೇರೊಬ್ಬ ಹೆಣ್ಣನ್ನು ಮದುವೆಯಾಗುವಂತೆ ಅಜ್ಜಿ ಹೇಳುತ್ತಾಳೆ. ಇದಕ್ಕೆ ಬರೀ ಮುಗುಳ್ನಕ್ಕು ಆತ ಸುಮ್ಮನಿರುತ್ತಾನೆ, ಹೊಲ, ಮನೆಯನ್ನು ಚೆನ್ನಾಗಿ ನೋಡಿಕೊಳ್ಳುವಂತೆ ಮನೆ ಮಂದಿಗೆ ಹೇಳಿದ ಶಿವಣ್ಣ ಮತ್ತೆ ಮೈಸೂರಿಗೆ ತೆರಳಿ ನಾಟಿ ಔಷಧಿ ಕೊಡುವ ಕಾಯಕದಲ್ಲಿ ತೊಡಗುತ್ತಾನೆ.

ಇತ್ತ ಗಂಗಾಳ ಕಸೂತಿ ಕಲೆ ದೇವಸ್ಥಾನ ಸಮಿತಿ ಅಧ್ಯಕ್ಷೆ ಸುನಂದ ಬನ್ನಪ್ಪ ಅವರಿಗೆ ಮೆಚ್ಚುಗೆಯಾಗುತ್ತದೆ. ಸೀರೆಯ ಮೇಲೆ ಆನೆ, ನವಿಲುಗಳ ಚಿತ್ತಾರ ಗಮನಸೆಳೆಯುತ್ತದೆ. ಇನ್ನಷ್ಟು ಕಸೂತಿ ಕಲೆ ಮುಂದುವರಿಸಿ, ಅದಕ್ಕೆ ಉತ್ತಮ ಮಾರುಕಟ್ಟೆ ಒದಗಿಸುವ ಪ್ರಯತ್ನ ಮಾಡುವುದಾಗಿ ಸುನಂದ ಗಂಗಾಳಿಗೆ ಭರವಸೆ ನೀಡುತ್ತಾಳೆ. ಇದರಿಂದ ಸ್ಫೂರ್ತಿಗೊಂಡ ಗಂಗಾ ಬಟ್ಟೆಯ ಮೇಲೆ ವೈವಿಧ್ಯಮಯ ಚಿತ್ತಾರ ಬರೆಯುವ ಕಸೂತಿ ಕಲೆಯ ತನ್ನ ಹವ್ಯಾಸವನ್ನು ಮತ್ತಷ್ಟು ಹುರುಪಿನಿಂದ ಮಾಡಲಾರಂಭಿಸುತ್ತಾಳೆ.

ಸ್ವಾತಂತ್ರ ಹೋರಾಟಗಾರರಾಗಿ, ಖಾದಿ ಮತ್ತಿತರ ದೇಶೀ ಪದಾರ್ಥಗಳನ್ನೆ ಬಳಸುತ್ತಿದ್ದರೂ ಅವರ ಹಿಂದಿನವರು ಬ್ರಿಟಿಷ್ ದೊರೆಗಳ ಕಾಲದವರಾಗಿದ್ದು ಅವರಿಗೆ ಇಂಗ್ಲೆಂಡ್ ಮತ್ತಿತರ ಯೂರೋಪಿನ ಪದಾರ್ಥಗಳನ್ನು ಕಂಡರೆ ಅದೇನೊ ಮೋಹ!

ಇದೀಗ ಎಲ್ಲರೂ ನಿಂತೇ ಇದ್ದುದನ್ನು ಕಂಡ ಸುನಂದ ಬನ್ನಪ್ಪ ಎಲ್ಲರನ್ನು ಕುಳಿತುಕೊಳ್ಳಲು ಹೇಳಿದರು. ಮೂವರು ಗಂಡಸರೂ ಕುಳಿತುಕೊಂಡರು. ಗಂಗೆ ಮಾತ್ರಾ ಮಗಳ ಸಮೇತ ನಿಂತೇ ಇದ್ದಳು.

ಸುನಂದ, 'ಏನು ಗಂಗಾ ಬಂದದ್ದು...?' ಎಂದು ಕೇಳುತ್ತಲೇ ಮಿಕ್ಕವರಿಗೆ ಹೇಳಿದರು, 'ಮೊದಲು ಗಂಗಾ ವಿಚಾರ ಕೇಳಿ, ಆ ಮೇಲೆ ನಿಮ್ಮ ಸಮಸ್ಯೆ ವಿಚಾರಿಸಿಕೊಳ್ತೇನೆ...'

ಗಂಗೆ, ಈಗಲಾದರೂ ಈ ಗಂಡಸರು ಎದ್ದು ಹೋಗಿ, ತಾವಿಬ್ಬರೇ ಮಾತಾಡಲು ಬಿಡುವರೇನೊ ಎಂದು ಆಶಿಸಿದಳು. ಆದರೆ ಹಾಗೇನೂ ಆಗಲಿಲ್ಲ. ಅವರೆಲ್ಲಾ ಕುರ್ಚಿಗೆ ಅಂಟಿಕೊಂಡು ಬಿಟ್ಟಿದ್ದರು. ಸುನಂದ ಬನ್ನಪ್ಪನವರಿಗೂ ಗಂಗೆಯ ಕಳವಳ ಅರಿವಿಗೆ ಬರಲಿಲ್ಲ. ಗಂಗೆಯಿಂದ ಏಕಾಂತದ ಮಾತುಗಳನ್ನು ನಿರೀಕ್ಷಿಸಿರದ ಆಕೆ ಕೂತವರನ್ನು ಹೊರಕ್ಕೆ ಕಳುಹಿಸಲೂ ಇಲ್ಲ.

ಗಂಗಾಗೆ ಮುಜುಗರವಾಯಿತು. ಏಕೆಂದರೆ ಇಲ್ಲಿದ್ದವರೆಂದರೆ, ಶ್ರೀಧರ ಭಟ್ಟರು, ಪ್ರಸಾದ ಮತ್ತು ಗಂಡ ಶಿವಣ್ಣ!

ಗಂಗಾ ತನಗಿಲ್ಲದ ಧೈರ್ಯವನ್ನು ಒಗ್ಗೂಡಿಸಲು ಯತ್ನಿಸಿದಳು. ಅದು ಬಹಳ ಕಷ್ಟವಾದರೂ, ಯತ್ನವಂತೂ ಅವಳದ್ದಾಗಿತ್ತು! ತಾನು ಧೈರ್ಯ ತೆಗೆದುಕೊಳ್ಳದಿದ್ದರೆ ತನ್ನ ಇಂದ್ರಾಗಾಂಧಿ ಭವಿಷ್ಯ ಕತ್ತಲಾಗೆ ಉಳಿದೀತು! ತನ್ನ ಮಾನ ಹೋದರೂ ಸರಿ ಈ ಕೂಸಿನ ಬಾಳು ಬಂಗಾರವಾಗಬೇಕು. ತಾನದಕ್ಕೆ ಗಟ್ಟಿಯಾಗಲೇ ಬೇಕು. ಬೇರೆ ದಾರಿಯೇ ತನಗಿಲ್ಲ! ಪದೇ ಪದೇ ಈ ಸುನಂದ ತಾಯಿಯವರಿಗೆ ತೊಂದರೆ ಕೊಡುವುದು ಸರಿಯಲ್ಲ. ಹಾಗೆ ಮಾಡಿದರೆ